

ಸಂಪಾದಕೀಯ

# ಇಲ್ಲಿದೆ ಬೆಳಕಿನ ಹಾದಿ..

ಮನುಷ್ಯನಾದವನು ಹೇಗೆ ಬದುಕಬೇಕು?

— ವಿವಿಧ ಕಾಲಘಟ್ಟಗಳಲ್ಲಿ ವಿಭಿನ್ನ ಸಂಸ್ಕೃತಿ-ಸಮಾಜ-ಪರಂಪರೆಗಳಲ್ಲಿ 'ಆದರ್ಶ ಜೀವನವಿದು' ಎಂಬುದನ್ನು ಹಲವು ರೀತಿಗಳಲ್ಲಿ ಕಂಡುಕೊಂಡದ್ದನ್ನು ಕಾಣುತ್ತೇವೆ. ಸುಖ, ಶಾಂತಿ, ನೆಮ್ಮದಿಯ ಪೂರ್ಣಜೀವನವನ್ನು ಅರ್ಥವತ್ತಾಗಿ ಬಾಳಬೇಕು ಎಂಬ ಆದರ್ಶ ಎಲ್ಲೆಡೆ ಸಾಮಾನ್ಯ; ಆದರೆ ಉತ್ತಮ ಮಾನವ ಜೀವನವೆಂದರೆ ಯಾವುದು ಎಂಬುದನ್ನು ವಿಭಿನ್ನ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿ ಕಂಡುಕೊಂಡದ್ದಿದೆ.

ಸಮಾಜದಲ್ಲಿ ಜನಸಾಮಾನ್ಯರಿಗೆ ಆದರ್ಶವನ್ನು ರೂಪಿಸಲು ಮಹತ್ವದ ಕೊಡುಗೆ ನೀಡುವ ಮಹಾತ್ಮರು ಎಲ್ಲ ಕಾಲದಲ್ಲೂ, ಎಲ್ಲ ದೇಶಗಳಲ್ಲೂ ಹುಟ್ಟಿ ಬರುತ್ತಾರೆ. ನಮ್ಮ ದೇಶದಲ್ಲಿ ರಾಮ, ಕೃಷ್ಣರಂಥ ಅವತಾರ ಪುರುಷರು, ಮೀರಾ, ಕಬೀರ, ಬಸವಣ್ಣರಂಥ ಸಾಧುಸಂತರು, ಶಂಕರ-ರಾಮಾನುಜರಂಥ ಆಚಾರ್ಯರು ಜೀವನದ ಆದರ್ಶವನ್ನು ರೂಪಿಸಿಕೊಟ್ಟಿದ್ದಾರೆ. ಒಬ್ಬೊಬ್ಬ ಮಹಾಪುರುಷರದು ಒಂದೊಂದು ದಾರಿ. ಆದರೆ ಮಹಾತ್ಮರು ಸುಮ್ಮನೆ ಮಹಾತ್ಮರಾಗಲಿಲ್ಲ; ಜೀವನದ ಕುಲುಮೆಯಲ್ಲಿ ನೊಂದು, ಬೆಂದು ಬದುಕನ್ನು ಅರ್ಥಮಾಡಿಕೊಂಡಿದ್ದಾರೆ, ಬೆಳಕಿನ ಹಾದಿಯನ್ನು ಕಂಡಿದ್ದಾರೆ.

## ಮಹಾತ್ಮರ ದಾರಿ

ಉಪನಿಷತ್ತುಗಳಲ್ಲಿ ಬರುವ ನಚಿಕೇತನ ವ್ಯಕ್ತಿತ್ವ ಅಂಥದು. ತಂದೆ ಸಾಮಾನ್ಯ ಗೃಹಸ್ಥನಂತೆ ವ್ಯಾವಹಾರಿಕ ವ್ಯಕ್ತಿ; ಜೀವನದಲ್ಲಿ ಏಳಿಗೆಯನ್ನು ಬಯಸಿದರೂ ಶ್ರದ್ಧೆ, ಪ್ರಾಮಾಣಿಕತೆ ಅವನಲ್ಲಿರಲಿಲ್ಲ. ಮಗನಾದರೋ ತಂದೆ ಮಾಡುತ್ತಿದ್ದ ಕಾಟಾಚಾರದ ಯಜ್ಞ, ದಾನಗಳನ್ನು ನೋಡಿ ಬೇಸರಿಸಿಕೊಂಡ. ತಂದೆಯ ಕೋಪಕ್ಕೆ ಗುರಿಯಾಗಿ ಯಮನ ಅತಿಥಿಯಾದ. ಯಮನನ್ನು ಎದುರಿಸಿದ ನಚಿಕೇತನು ತನ್ನ ಅಪಾರ ಶ್ರದ್ಧೆ, ಬುದ್ಧಿವಂತಿಕೆ, ಸತ್ಯನಿಷ್ಠೆಗಳಿಂದ ಅಸಾಧಾರಣ ಆತ್ಮವಿದ್ಯೆಯನ್ನು ಅರಿತುಕೊಂಡ. ಈ ಬಗೆಯ ಅಸಾಧಾರಣ ವ್ಯಕ್ತಿತ್ವ ಅವನಿಗೆ ಹೇಗೆ ಬಂದೊದಗಿತ್ತು? ತಂದೆಯಿಂದ ಮಗನಿಗೆ ಬರುತ್ತದೆ ಎನ್ನಲಾಗುವ 'ಅನುವಂಶಿಕತೆ' ಇದಲ್ಲವೇ ಅಲ್ಲ! ಜನ್ಮತಃ ಪಡೆಯುವ ವಿಶಿಷ್ಟ ಗುಣವು ವ್ಯಕ್ತಿಯೊಬ್ಬನಿಗೆ ಪೂರ್ವಜನ್ಮಗಳಿಂದ, ಪೂರ್ವಸಂಸ್ಕಾರಗಳಿಂದ ಬರುತ್ತದೆ - ವೇದಾಂತದ ಪ್ರಕಾರ. ಈ ದೃಷ್ಟಿಯಿಂದ ಜನ್ಮತಃ ಭಕ್ತಿ, ವೈರಾಗ್ಯಗಳನ್ನು ಹೊಂದಿದ್ದ ಧ್ರುವ, ಪ್ರಹ್ಲಾದರ ಸ್ವಭಾವಗಳು ನಿಜಕ್ಕೂ ಪೂರ್ವಜನ್ಮಗಳ ಸಾಧನೆಯ ಫಲವೇ ಎನ್ನಬೇಕು. ಆದರೆ ಬುದ್ಧನಂತಹ, ಶಂಕರರಂತಹ ಮಹಾತ್ಮರುಗಳು ತಮ್ಮ ಮಾರ್ಗವನ್ನು ತಾವೇ ಕಂಡುಕೊಂಡರು. ಇತರರಿಂದ ಕಲಿತದ್ದು ಕೆಲವು ಅಂಶಗಳು ಮಾತ್ರ; ತಮ್ಮ ಅಂತಃಸತ್ತ್ವದಿಂದ ಕಂಡುಕೊಂಡದ್ದೇ ಬಹುಪಾಲು. ಸಮಸ್ತ ಪ್ರಪಂಚದ ದಾರಿ ಒಂದಾದರೆ, ಇವರು ತುಳಿದ ದಾರಿಯೇ ಬೇರೆ. ಕಾಲಕಾಲಕ್ಕೆ ಇಂತಹ ವ್ಯಕ್ತಿತ್ವಗಳು ಜನತೆಗೆ ದಾರಿ ತೋರುತ್ತವೆ. ಆಧುನಿಕ ಯುಗದಲ್ಲೂ ಶ್ರೀರಾಮಕೃಷ್ಣ-ವಿವೇಕಾನಂದರು ಇದೇ ರೀತಿ ಹೊಸ ದಾರಿ, ಹೊಸ ಆದರ್ಶಗಳನ್ನು ರೂಪಿಸಿದರು.

## ಸಾಮಾನ್ಯರ ಆದರ್ಶವೇನು?

ಮಹಾತ್ಮರುಗಳು ತಮ್ಮ ದಾರಿಯನ್ನು ತಾವೇ ಕಂಡುಕೊಂಡರು, ತಮ್ಮೊಂದಿಗೆ ಇತರರ ಬದುಕನ್ನೂ ಬೆಳಗಿಸಿದರು, ನಿಜ. ಆದರೆ ಜನಸಾಮಾನ್ಯರು ಅವರಂತೆ ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳಬಲ್ಲರೆ? ವಿದ್ಯಾಭ್ಯಾಸ, ಉದ್ಯೋಗ, ಕುಟುಂಬ - ಇವೆಲ್ಲ ಸಾಮಾನ್ಯವಾಗಿ ಎಲ್ಲರೂ ಬದುಕುವ ರೀತಿ; ಸಮಾಜ ಇವುಗಳನ್ನು ಒದಗಿಸಿಕೊಡುತ್ತದೆ; ಇವುಗಳನ್ನು ಅವಲಂಬಿಸಿ ಬದುಕು ಎನ್ನುತ್ತದೆ. ಆದರೆ ಇಷ್ಟು ಸಾಕೆ? ಎಲ್ಲರಿಗೂ ಹೊಟ್ಟೆಗೆ, ಬಟ್ಟೆಗೆ, ಒಡನಾಟಕ್ಕೆ ಒಂದು ಅವಕಾಶ ಲಭಿಸಿದರೆ ಸಾಕಾಗುವುದೆ? ಕನಸು, ಆದರ್ಶ, ಧ್ಯೇಯ - ಇವನ್ನು ಹೊಂದಿರುವುದು ಎಲ್ಲರ ಹಕ್ಕು. ಅದನ್ನು ಬಾಲ್ಯದಲ್ಲಿ, ತಾರುಣ್ಯದಲ್ಲಿ ಎಲ್ಲರೂ

ಹೊಂದಿರಲೇಬೇಕು. ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಅದು ಒಂದು ಪ್ರೇರಕ ಶಕ್ತಿ. ಆದರೆ ಎಲ್ಲರ ಧ್ಯೇಯ, ಆದರ್ಶಗಳು ಒಂದೇ ಆಗಲಾರದು. ಪ್ರತಿಯೊಬ್ಬರೂ ಅತ್ಯುತ್ತಮ ಜೀವನ ನಡೆಸಲು ಬಯಸುತ್ತಾರೆ. ಆದರೆ ಹೇಗೆ? ದಾರಿ ಯಾವುದು? ಯಾವುದು ಆದರ್ಶ? – ಇದೇ ಪ್ರಶ್ನೆ. ಈ ಪ್ರಶ್ನೆಗೆ ಉತ್ತರವನ್ನು ಯಾರು ನೀಡಬಲ್ಲರು?

ಆಧುನಿಕ ಭಾರತದಲ್ಲಿ ಸಾಂಪ್ರದಾಯಿಕ ಆದರ್ಶ, ಮೌಲ್ಯಗಳು ಕುಸಿದುಹೋಗಿ, ಅದರ ಜಾಗದಲ್ಲಿ ಪಾಶ್ಚಾತ್ಯ ಮಾದರಿಗಳು ನಿರ್ಮಿತವಾಗಿವೆ. ಕೋಟ್ಯಾಧೀಶರಾಗುವ, ವಿದೇಶಗಳಲ್ಲಿ ಉನ್ನತ ಹುದ್ದೆ ಗಳಿಸುವ ಕನಸನ್ನು ಯುವಜನತೆ ಕಾಣುವಂತಾದರೆ, ಅದನ್ನು ಸಾಮಾಜಿಕ ವೈಪರೀತ್ಯವೆನ್ನಬೇಕೇ, ಅಥವಾ ಬದಲಾದ ಆದರ್ಶವೆನ್ನಬೇಕೆ? ಜಾಗತಿಕ ಮಟ್ಟದಲ್ಲಿ ಉಂಟಾದ ಬದಲಾವಣೆಗಳಿಂದ ನಮ್ಮ ಸನಾತನ ಮೌಲ್ಯಗಳು ಅರ್ಥ ಕಳೆದುಕೊಳ್ಳುವಂತಾಯಿತು ಎಂದಾದರೆ, ಅದು ಅತ್ಯಂತ ದುರದೃಷ್ಟಕರ. ಆಧುನಿಕ ಆವಿಷ್ಕಾರಗಳ ಹಾಗೂ ಆಗುಹೋಗುಗಳ ನಡುವೆಯೂ ಮಾನವನ ಶ್ರೇಷ್ಠ ಆದರ್ಶವಾಗಿ ನಿಲ್ಲಬಲ್ಲ ಶಕ್ತಿ ಭಾರತೀಯ ಮೌಲ್ಯಗಳಿವೆ. ಆದರೆ ಅವುಗಳನ್ನು ಸಮರ್ಪಕವಾದ ರೀತಿಯಲ್ಲಿ ನಮ್ಮ ಜನರಿಗೆ ತಲುಪಿಸುವ ಕೆಲಸವನ್ನು ಇಂದಿನ ವಿದ್ಯಾಭ್ಯಾಸವು ಮಾಡುತ್ತಿಲ್ಲ ಎಂದೇ ಹೇಳಬೇಕಾಗಿದೆ.

ಸ್ವಾಮಿ ವಿವೇಕಾನಂದರು, ''ಪುರುಷಸಿಂಹರನ್ನು ಮಾಡುವ ಧರ್ಮ ನಮಗಿಂದು ಬೇಕಾಗಿದೆ. ಪುರುಷಸಿಂಹರನ್ನು ಮಾಡುವ ಸಿದ್ಧಾಂತ ನಮಗೆ ಬೇಕಾಗಿದೆ. ಸರ್ವತೋಮುಖವಾದ ಪುರುಷಸಿಂಹರನ್ನು ಮಾಡುವ ವಿದ್ಯಾಭ್ಯಾಸ ನಮಗೆ ಇಂದು ಬೇಕಾಗಿದೆ'' ಎಂದು ಸಾರಿದ್ದರು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೦೪)* ಈ ಬಗೆಯಲ್ಲಿ ವ್ಯಕ್ತಿತ್ವವನ್ನು ರೂಪಿಸಲು ಅಗತ್ಯವಾದ ಆಕರಗಳು ಯಾವುವು? ಯಾವ ವೈಚಾರಿಕ ನಿಲುವುಗಳಿಂದ ಪ್ರೇರಿತವಾಗಿ ಈ ಆಕರಗಳನ್ನು ಒದಗಿಸಬೇಕು? ಇದನ್ನು ಶಿಕ್ಷಣ ನೀತಿ ರೂಪಿಸುವವರು ಆಳವಾಗಿ ಚಿಂತಿಸಬೇಕಾಗಿದೆ.

### ಆದರ್ಶದ ಮೂಲ ಆಕರಗಳು

ಯಾವುದೇ ಒಂದು ಜನಾಂಗದಲ್ಲಿ ಒಂದು ಮೂಲಭೂತ ವಿಚಾರವು ಪ್ರಧಾನವಾಗಿರುತ್ತದೆ. ಭಾರತದ ಮಟ್ಟಿಗೆ, ಆಧ್ಯಾತ್ಮಿಕತೆಯೇ ಈ ಮೂಲಭೂತ ವಿಚಾರ ಎಂದು ಸ್ವಾಮೀಜಿ ತಮ್ಮ ಪ್ರವಚನಗಳಲ್ಲಿ ಸಾರುತ್ತಾರೆ. ಇಲ್ಲಿ ಜನಜೀವನದ ಉದ್ದಗಲಕ್ಕೂ ಆಧ್ಯಾತ್ಮಿಕತೆ ಹಾಸುಹೊಕ್ಕಾಗಿದೆ. ದೈನಂದಿನ ಬದುಕಿನಲ್ಲಿ, ವಿವಿಧ ಕಸುಬುಗಳಲ್ಲಿ, ಶಿಕ್ಷಣ–ಹಬ್ಬ ಹರಿದಿನ–ಸಾಮಾಜಿಕ ನಡವಳಿಕೆಗಳಲ್ಲಿ ಧಾರ್ಮಿಕ ಆಚರಣೆ, ತತ್ತ್ವಗಳು ಅತ್ಯಂತ ವ್ಯಾಪಕವೂ ಅವಿಭಾಜ್ಯವೂ ಆದ ಅಂಗಗಳಾಗಿವೆ. ಈ ಹಿನ್ನೆಲೆಯಲ್ಲಿ ಭಾರತೀಯರ ಜೀವನದ ಆದರ್ಶವೇ ಆಧ್ಯಾತ್ಮಿಕತೆ ಎನ್ನಬಹುದು. ಎಲ್ಲ ದೇಶಗಳಲ್ಲಿ ರಾಜಕೀಯ ನಾಯಕರು, ಇತಿಹಾಸ ಪುರುಷರು, ಸಾಹಿತಿ–ಲೇಖಕರು ಅತ್ಯಂತ ಗೌರವಕ್ಕೆ ಪಾತ್ರರು; ಇಲ್ಲೂ ಅವರನ್ನು ಗೌರವಿಸಲಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ ಆಧ್ಯಾತ್ಮಿಕ ವ್ಯಕ್ತಿಗಳನ್ನು ಮಾತ್ರ ಭಗವಂತನ ಪ್ರತಿರೂಪವೆಂದೇ ಪೂಜಿಸಲಾಗುವುದು. ಭಗವಂತನಿಗೆ ಸಂಬಂಧಿಸಿದ್ದೆಲ್ಲವೂ ಪೂಜ್ಯ ಹಾಗೂ ಪವಿತ್ರ.

ಭಾರತೀಯ ಆದರ್ಶಕ್ಕೆ ಮೂಲ ಆಕರಗಳು ಲಭಿಸುವುದು ಇಲ್ಲಿನ ಸುದೀರ್ಘ ಇತಿಹಾಸ, ಪುರಾಣ, ತತ್ತ್ವಗಳಿಂದ; ಅದಕ್ಕಿಂತಲೂ ಮುಖ್ಯವಾಗಿ ಸಾಧು–ಸಂತರ ಪರಂಪರೆಯಿಂದ. ಒಂದೆಡೆ ಧಾರ್ಮಿಕ ಪರಂಪರೆ, ಇನ್ನೊಂದೆಡೆ ತಾತ್ತ್ವಿಕ ಪರಂಪರೆ, ಇದರೊಂದಿಗೆ ಸಂತ ಪರಂಪರೆ ಮುಪ್ಪುರಿಯಾಗಿ ಇಲ್ಲಿನ ಆಧ್ಯಾತ್ಮಿಕ ಪರಂಪರೆಯನ್ನು ಅಸಾಧಾರಣ ಶಕ್ತಿಯನ್ನಾಗಿಸಿದೆ. ಈ ದೇಶದಲ್ಲಿ ಹುಟ್ಟಿ ಬೆಳೆದ ಪ್ರತಿಯೊಬ್ಬ ವ್ಯಕ್ತಿಯೂ ಈ ಪರಂಪರೆಯ ಗುಣ, ಲಕ್ಷಣಗಳನ್ನು ಒಂದಲ್ಲ ಒಂದು ರೀತಿ ಸ್ಪರ್ಶಿಸದೆ ಇರಲಾರ. ಬಾಲ್ಯದಿಂದಲೇ ಮೈಗೂಡಿಸಿಕೊಂಡು ಬಂದ ನಂಬಿಕೆ, ಆಚರಣೆ, ತತ್ತ್ವ ಹಾಗೂ ಭಾವನೆಗಳು ಜೀವನದುದ್ದಕ್ಕೂ ಒಂದು ರೀತಿ 'ಭಾರತೀಯ'ವಾದ ಬದುಕನ್ನು ನಿರ್ಮಿಸುತ್ತದೆ. ಪ್ರಪಂಚದ ಯಾವ ಮೂಲೆಗೆ ಹೋಗಿ ಬದುಕಿದರೂ, ಇಲ್ಲಿ ಹುಟ್ಟಿ ಬೆಳೆದ ವ್ಯಕ್ತಿಯೊಬ್ಬನು ಚಿಂತಿಸುವ ರೀತಿ 'ಭಾರತೀಯ'ವಾಗಿರುತ್ತದೆ.

ಇಷ್ಟರಿಂದಲೇ ನಾವು ನಮ್ಮ ಎಲ್ಲ ಆದರ್ಶಗಳನ್ನೂ ಜೀವನದಲ್ಲಿ ಕಂಡುಕೊಳ್ಳುತ್ತೇವೆ; ಜೀವನದ ಹಾದಿಯನ್ನು ಕಂಡುಕೊಳ್ಳುವಲ್ಲಿ ನಮಗೆ ಯಾವ ಸಮಸ್ಯೆಗಳೂ ಇಲ್ಲ ಎಂದು ಭಾವಿಸಲಾಗದು. ನಮ್ಮಲ್ಲಿ ಸಹಸ್ರಾರು ವರ್ಷಗಳ ನಿರಂತರ ಪ್ರಯತ್ನಗಳಿಂದ ರೂಪಿತವಾದ ಪರಂಪರೆಯು ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರ ಅರಿವಿಗೇ ಬರುತ್ತಿಲ್ಲವೆಂಬುದು ವಾಸ್ತವ. ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿ, ನಗರ ಜೀವನಶೈಲಿ, ಸಂಪ್ರದಾಯಿಕ ಮೌಲ್ಯ–ನಂಬಿಕೆಗಳತ್ತ ಪಾಶ್ಚಾತ್ಯ ಹಾಗೂ ಇನ್ನಿತರ ಶಕ್ತಿಗಳು ಬಿಂಬಿಸುವ ದೋಷಪೂರಿತ ಆರೋಪಗಳು ಜನರ ಒಲವನ್ನು ಬೇರೆ ಕಡೆ ಸೆಳೆಯುತ್ತಿವೆ. 'ಇಂದಿನ ಫ್ಯಾಷನ್' ಎಂಬ ಹೆಸರಿನಲ್ಲಿ ಆಧುನಿಕರೆಂದುಕೊಳ್ಳುವ ಜನರು ತಮ್ಮ ಅಜ್ಞಾನವನ್ನು ಮೆರೆಯುತ್ತಿರುವುದು ವ್ಯಾಪಕವಾಗಿದೆ.

### ವೇದಾಂತದ ಮಾರ್ಗ

ಭಾರತೀಯ ಧರ್ಮ, ತತ್ತ್ವ, ಆಧ್ಯಾತ್ಮಿಕತೆ ಈ ಮೂರು ಅಂಶಗಳನ್ನೂ ಬೆಸೆಯುವ ಒಂದು ವಾಹಿನಿಯೇ ವೇದಾಂತ. ಮೂಲರೂಪದಲ್ಲಿ ಇದು ತತ್ತ್ವ ಅಥವಾ ದರ್ಶನ; ಆಚರಣೆ ಹಾಗೂ ಜೀವನವಿಧಾನದ ದೃಷ್ಟಿಯಿಂದ ಇದು ಆಧ್ಯಾತ್ಮಿಕತೆ; ಹಾಗೂ ವಿಶಾಲವಾದ ದೃಷ್ಟಿಯಲ್ಲಿ ಇದು ಹಿಂದೂಧರ್ಮದ ಹೃದಯ. ವೇದಾಂತವು ವೇದ, ಉಪನಿಷತ್ತುಗಳ ಮೂಲಕ ವ್ಯಕ್ತಗೊಂಡು, ಗೀತೆಯೆಂಬ ಗಂಗಾಪ್ರವಾಹದಲ್ಲಿ ಮಿಳಿತವಾಗಿ,

ಬ್ರಹ್ಮಸೂತ್ರವೆಂಬ ಅದ್ಭುತ ಕೃತಿಯ ಮೂಲಕ ನಿಖರತೆಯನ್ನು ಪಡೆಯಿತು. 'ಪ್ರಸ್ಥಾನತ್ರಯ'ವೆಂದೇ ಕರೆಯಲಾಗುವ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳು ವೇದಾಂತದರ್ಶನವನ್ನು ರೂಪಿಸಿದವು. ಶ್ರೀ ಶಂಕರ, ಶ್ರೀ ರಾಮಾನುಜ, ಶ್ರೀ ಮಧ್ವರೇ ಮುಂತಾದ ಆಚಾರ್ಯರುಗಳ ಮೂಲಕ ವೇದಾಂತ ತತ್ತ್ವಗಳು ವಿಭಿನ್ನ ದೃಷ್ಟಿಕೋನಗಳ ಮಾರ್ಗವನ್ನು ರೂಪಿಸಿ, ಜನರ ಜೀವನದಲ್ಲಿ ಹಾಸುಹೊಕ್ಕಾದವು.

ಜನರ ಜೀವನದಲ್ಲಿ ವೇದಾಂತವು ಎಷ್ಟು ಗಾಢವಾಗಿ ಬೆರೆತಿದೆ ಎಂಬುದನ್ನು ಗಮನಿಸಿದರೆ, ಅದರ ಸುದೀರ್ಘ ಪರಂಪರೆ ಉಂಟುಮಾಡಿದ ಪ್ರಭಾವದ ಶಕ್ತಿಯನ್ನು ನಾವು ಅರಿಯಬಹುದು. ಭಾರತದ ಉದ್ದಗಲಕ್ಕೂ, ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ – ಹಾಗೂ ದ್ವಾರಕೆಯಿಂದ ಅಸ್ಸಾಮಿನ ತನಕ – ಪ್ರತಿಯೊಬ್ಬನೂ ತನ್ನ ಬದುಕನ್ನು ಕಾಣುವ ರೀತಿ ಹೀಗೆ: 'ನನ್ನ ಏಳಿಗೆಯೆಲ್ಲವೂ ನನ್ನ ಹಿರಿಯರ ಪುಣ್ಯಫಲ. ನನ್ನ ದುರ್ಗತಿಯೆಲ್ಲವೂ ನನ್ನ ಕರ್ಮಫಲ. ಭಗವಂತ ಇಟ್ಟಂತೆ ಇದ್ದೇನೆ. ಆಡಿಸಿದಂತೆ ಆಡುತ್ತೇನೆ.' ನಾವು ಮಾಡುವ ಕರ್ಮಗಳೆಲ್ಲವೂ ಫಲ ನೀಡುತ್ತವೆ – ಅವೇ ಪಾಪ, ಪುಣ್ಯಗಳ ರೂಪದಲ್ಲಿ ನಮ್ಮ ಜೀವನದಲ್ಲಿ ಮರಳಿ ಬರುತ್ತವೆ. ಕರ್ಮಫಲವನ್ನು ನಾವು ಅನುಭವಿಸಲೇಬೇಕು. ಭಗವಂತ ನಮ್ಮೆಲ್ಲ ಬದುಕನ್ನೂ ನಿಯಂತ್ರಿಸುತ್ತಾನೆ. ಅವನಲ್ಲಿ ಶರಣಾದರೆ ನಮ್ಮೆಲ್ಲ ಬಯಕೆಗಳೂ ಪೂರ್ಣಗೊಳ್ಳುತ್ತವೆ – ಇಷ್ಟು ತತ್ತ್ವಗಳನ್ನೂ ನಾವು ಇಲ್ಲಿ ಕಾಣುತ್ತೇವೆ.

ಇದೇ ರೀತಿ, ವೇದಾಂತದ ತಿರುಳಾದ ಆತ್ಮ-ಬ್ರಹ್ಮ ತತ್ತ್ವ, ಜೀವದ ಅಮರತ್ವ, ಸಾಧನೆ ಮತ್ತು ಮುಕ್ತಿ, ಇಹಜೀವನದ ನಶ್ವರತೆ – ಇವನ್ನೆಲ್ಲ ದೈನಂದಿನ ಜೀವನದಲ್ಲಿ ಜನರು ಹಲವು ಸಂದರ್ಭಗಳಲ್ಲಿ ನೆನಪಿಸಿಕೊಳ್ಳುತ್ತಾರೆ. ಜನನದಲ್ಲಿ, ಮರಣದಲ್ಲಿ, ನೋವು-ನಲಿವುಗಳಲ್ಲಿ ಸಾಮಾನ್ಯ ಜನರು ಭಗವಂತನ ಸ್ಮರಣೆ ಮಾಡಿಕೊಳ್ಳುವುದು, ತಮ್ಮನ್ನು ಮೀರಿದ ಅಗೋಚರ ಶಕ್ತಿಗೆ ಮಣಿಯುವುದು ತೀರ ಸಹಜವಾಗಿದೆ. ಇವೆಲ್ಲ ಧಾರ್ಮಿಕ, ಆಧ್ಯಾತ್ಮಿಕ ಶ್ರದ್ಧೆ-ನಂಬಿಕೆಗಳಿಗೆ ಪೂರಕವಾಗಿವೆ. ಜನರಲ್ಲಿ ಆಧ್ಯಾತ್ಮಿಕ ಆದರ್ಶಗಳನ್ನು ರೂಪಿಸಲು ನೆರವಾಗಿವೆ.

### 'ಆಧುನಿಕ'ರ ಸಂದೇಹ

ಲೌಕಿಕ ಜೀವನದಲ್ಲಿ ಮಗ್ನನಾದ ವ್ಯಕ್ತಿ ಆಧ್ಯಾತ್ಮಿಕ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದು ಎಷ್ಟು ಸರಿ, ಅದು ಏಳಿಗೆ-ಅಭಿವೃದ್ಧಿಗೆ ಹಾನಿಕರವಲ್ಲವೆ? – ಈ ರೀತಿ ಪ್ರಶ್ನಿಸುವವರಿದ್ದಾರೆ. ಮೇಲ್ನೋಟಕ್ಕೆ ತ್ಯಾಗ, ವೈರಾಗ್ಯ, ಅನಾಸಕ್ತಿ, ನಿಸ್ವಾರ್ಥ ಭಾವನೆಗಳನ್ನು ಬೋಧಿಸುವ ಧಾರ್ಮಿಕ-ಆಧ್ಯಾತ್ಮಿಕ ಆದರ್ಶಗಳು ಜನರನ್ನು ಅಭಿವೃದ್ಧಿ-ಉನ್ನತಿ-ಲೌಕಿಕ ವ್ಯವಹಾರಗಳಿಂದ ದೂರ ಸರಿಸುವಂತೆ ಕಂಡುಬರುತ್ತದೆ, ನಿಜ. ಆದರೆ ಈ ಆಧ್ಯಾತ್ಮಿಕ ಆದರ್ಶಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿದಾಗ, ಮನುಷ್ಯನು ಪ್ರಪಂಚದಲ್ಲಿ ಅತ್ಯಂತ ಸಮೃದ್ಧ ಜೀವನವನ್ನು ನಡೆಸುತ್ತಲೇ ಆಧ್ಯಾತ್ಮಿಕ ಆದರ್ಶವನ್ನು ಹೊಂದಿರುವುದು ಸಾಧ್ಯವೆಂಬುದು ಸ್ಪಷ್ಟವಾಗುತ್ತದೆ. ಗೀತೆಯಲ್ಲಿ ಶ್ರೀಕೃಷ್ಣನು ಬೋಧಿಸಿದ ಕರ್ಮಯೋಗವು ಅತ್ಯಂತ ಪ್ರಾಯೋಗಿಕ, ವಾಸ್ತವಿಕ. ಅದನ್ನೇ ಹೊಸ ಭಾಷೆಯಲ್ಲಿ ಸ್ವಾಮೀಜಿ ಹೀಗೆ ವಿವರಿಸುತ್ತಾರೆ: ''ವೇದಗಳ ಮೇಲೆ ಅಧಿಕಾರಯುತವಾದ ಅಸದೃಶವಾದ ಭಾಷ್ಯವನ್ನು, ಆ ವೇದಗಳನ್ನು ಪ್ರಚೋದಿಸಿದ ಶ್ರೀಕೃಷ್ಣನೇ ಗೀತೆಯಲ್ಲಿ ಮಾಡಿರುವನು. ಜಗತ್ತಿನ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿರುವ ಸರ್ವರಿಗೂ ಉಪನಿಷತ್ತಿನ ಭಾವನೆಗಳು ಅನ್ವಯಿಸುವುವು. ಈ ವೇದಾಂತದ ಭಾವನೆಗಳು ಹೊರಗೆ ಬರಬೇಕು. ಅವು ಕೇವಲ ಅರಣ್ಯದಲ್ಲಿ ಮತ್ತು ಗಿರಿಗುಹೆಗಳಲ್ಲಿ ಮಾತ್ರ ಇರುವುದಲ್ಲ. ನ್ಯಾಯಾಸ್ಥಾನದಲ್ಲಿ, ಪ್ರಾರ್ಥನಾಲಯದಲ್ಲಿ, ಬಡವನ ಕುಟೀರದಲ್ಲಿ ವೇದಾಂತ ರೂಢಿಗೆ ಬರಬೇಕು. ಮೀನನ್ನು ಹಿಡಿಯುವ ಬೆಸ್ತರಿಗೂ, ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ವೇದಾಂತ ಸಹಾಯಕ್ಕೆ ಬರಬೇಕು.. ಬೆಸ್ತ ತಾನು ಆತ್ಮನೆಂದು ತಿಳಿದರೆ ಅವನು ಒಳ್ಳೆಯ ಬೆಸ್ತನಾಗುವನು ವಿದ್ಯಾರ್ಥಿ ತಾನು ಆತ್ಮನೆಂದು ತಿಳಿದರೆ ಒಳ್ಳೆಯ ವಿದ್ಯಾರ್ಥಿಯಾಗುವನು. ವಕೀಲನು ತಾನು ಆತ್ಮನೆಂದು ತಿಳಿದರೆ ಆತ ಒಳ್ಳೆಯ ವಕೀಲನಾಗುವನು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು. ೧೨೨)*

ಪ್ರಪಂಚ ಬದಲಾಗುತ್ತಲೇ ಇರುತ್ತದೆ; ಜನರ ದೃಷ್ಟಿಕೋನಗಳೂ ಬದಲಾಗುತ್ತವೆ. ಆದರೆ ಆಧ್ಯಾತ್ಮಿಕ ಮೂಲಭೂತ ಭಾವನೆಗಳು ಬದಲಾಗುವುದಿಲ್ಲ. ನಮ್ಮ ಆದರ್ಶಗಳು ತಾತ್ಕಾಲಿಕ-ಲೌಕಿಕ ಸಂಗತಿಗಳನ್ನು ಅವಲಂಬಿಸಿದ್ದರೆ, ನಮ್ಮ ಜೀವನವೂ ಲೌಕಿಕ ನೆಲೆಯಲ್ಲಿ ಮುಕ್ತಾಯ ಹೊಂದುತ್ತವೆ. ಅದಕ್ಕೆ ಬದಲಾಗಿ, ನಮ್ಮ ಆದರ್ಶಗಳು ಶಾಶ್ವತವಾದ, ಎಲ್ಲವನ್ನೂ ಒಳಗೊಳ್ಳುವ ಮೂಲಭೂತ ತತ್ತ್ವಗಳನ್ನು ಅವಲಂಬಿಸಿದ್ದರೆ, ಅವು ತಾತ್ಕಾಲಿಕ ನೆಲೆಯನ್ನು ಮೀರಿ ನಮ್ಮ ಬದುಕನ್ನು ವಿಸ್ತರಿಸುತ್ತವೆ. ಭಾರತೀಯ ಆಧ್ಯಾತ್ಮಿಕ ಭಾವನೆಗಳು ಆದಿ-ಅಂತ್ಯಗಳಿಲ್ಲದ, ಅನಂತ ತತ್ತ್ವಗಳನ್ನು ಆಧರಿಸಿವೆ; ಆದ್ದರಿಂದ ಈ ಭಾವನೆಗಳನ್ನು ಸ್ಪರ್ಶಿಸುವ ಉನ್ನತ ಆದರ್ಶಗಳು ನಮ್ಮ ಜೀವನವನ್ನೂ ನಮ್ಮ ಅರಿವಿನ ಪರಿಧಿಯನ್ನೂ ಉನ್ನತ-ಅಲೌಕಿಕ ನೆಲೆಗೆ ಏರಿಸಬಲ್ಲವು. ಮಾನವನು ಈ ಸಾಧ್ಯತೆಗಳನ್ನು ಅರ್ಥಮಾಡಿಕೊಂಡು, ಜೀವನದಲ್ಲಿ ಅಳವಡಿಸಿಕೊಂಡು ಅನುಭವಿಸಿದಾಗಲೇ ಜೀವನ ಸಾರ್ಥಕವಾಗುವುದು. *

### ಮೇ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಶುಕ್ರವಾರ | ಶ್ರೀ ಶಂಕರ ಜಯಂತಿ<br>ಶ್ರೀ ರಾಮಾನುಜ ಜಯಂತಿ |
| ೮ | ಗುರುವಾರ | ಏಕಾದಶಿ |
| ೧೨ | ಸೋಮವಾರ | ಬುದ್ಧಪೂರ್ಣಿಮಾ |
| ೨೩ | ಶುಕ್ರವಾರ | ಏಕಾದಶಿ |